# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 538 |
| ಸದಸ್ಯರ ಹೆಸರು | ಶ್ರೀ ಅರುಣ ಶಹಾಪುರ |
| ಉತ್ತರಿಸಬೇಕಾದ ದಿನಾಂಕ | 13-12-2018 |
| ಉತ್ತರಿಸಬೇಕಾದ ಸಚಿವರು | ಉನ್ನತ ಶಿಕ್ಷಣ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ) | ಅನುದಾನಿತ ಸಂಸ್ಥೆಗಳ ಶಿಕ್ಷಕ ಸಿಬ್ಬಂದಿ ವರ್ಗದವರಿಗೆ ಸೇವೆಗೆ ಸೇರಿದ ದಿನಾಂಕದಿಂದಲೇ ಸೇವಾ ಸೌಲಭ್ಯಗಳನ್ನು ಒದಗಿಸುವ ಕುರಿತು (ಕಾಲ್ಪನಿಕ ವೇತನ ಬಡ್ತಿ) ಸರ್ಕಾರ ತಕ್ಷಣ ಕ್ರಮಕ್ಕೈಗೊಳ್ಳುವುದೇ; | ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿ ವರ್ಗದವರಿಗೆ ಸೇವೆಗೆ ಸೇರಿದ ದಿನಾಂಕದಿಂದ ವೇತನಾನುದಾನಕ್ಕೆ ಒಳಪಡಿಸುವ ದಿನಾಂಕದವರೆಗಿನ ಅನುದಾನರಹಿತ ಸೇವೆಯನ್ನು ಸೇವಾ ಸೌಲಭ್ಯಗಳಿಗಾಗಿ ಪರಿಗಣಿಸುವ ಕುರಿತಂತೆ ರಚಿಸಲಾದ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿಯು ತನ್ನ ವರದಿಯನ್ನು ಸಲ್ಲಿಸಿದೆ. ಮುಂದುವರೆದು, ಇದೇ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಜಾರಿಗೆ ತಂದಿದ್ದ 2014 ರ ಅಧಿನಿಯಮವನ್ನು ತಳ್ಳಿಹಾಕಿದ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ರಾಜ್ಯ ಸರ್ಕಾರದ ರಿಟ್ ಅಪೀಲು ವಿಚಾರಣಾ ಹಂತದಲ್ಲಿ ಬಾಕಿ ಇರುತ್ತದೆ.<br><br>ಈ ಹಿನ್ನೆಲೆಯಲ್ಲಿ ವಿಶೇಷ ಸದನ ಸಮಿತಿಯ ವರದಿಯಲ್ಲಿನ ಶಿಫಾರಸ್ಸುಗಳ ಕುರಿತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯೊಂದಿಗೆ ಸಮಾಲೋಚಿಸಿ, ಕಾನೂನಿನ ರೀತ್ಯಾ ಪರಿಶೀಲಿಸಿ ಈ ಬಗ್ಗೆ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು. |
| ಆ) | ಸೇವೆಗೆ ಸೇರಿದ ದಿನಾಂಕವನ್ನು ಪರಿಗಣಿಸಿ ಪಿಂಚಣಿ, ನಿವೃತ್ತಿ ಎಲ್ಲಾ ಉಪಲಬ್ಧಗಳನ್ನು ಒದಗಿಸಿಕೊಡಲು ಸರ್ಕಾರ ತಕ್ಷಣ ಕ್ರಮಕ್ಕೈಗೊಂಡು ಕಾರ್ಯಾನ್ವಯಗೊಳಿಸಲು ತೆಗೆದುಕೊಂಡ ಕ್ರಮ ಏನು; | ಕ್ರಮ ಸಂಖ್ಯೆ (ಅ) ಗೆ ನೀಡಿರುವ ಉತ್ತರವನ್ನು ಪುನರುಚ್ಚರಿಸಿದೆ. |
| ಇ) | ಹಳೆಯ ಹಾಗೂ ಹೊಸ ಪಿಂಚಣಿ ಸೌಲಭ್ಯ ಪಡೆಯದ ಎಲ್ಲಾ ಅನುದಾನಿತ ಸಿಬ್ಬಂದಿ ವರ್ಗಕ್ಕೆ ಹಳೆಯ (ನಿಶ್ಚಿತ) ಪಿಂಚಣಿ ವ್ಯವಸ್ಥೆಯನ್ನೇ ಮುಂದುವರಿಸಲು ಸರ್ಕಾರ ಯಾವ ಕಾಲಮಿತಿಯೊಳಗೆ ಕ್ರಮ ತೆಗೆದುಕೊಳ್ಳಲಾಗುವುದು; | ಹಳೆ ಹಾಗೂ ಹೊಸ ಪಿಂಚಣಿ ಸೌಲಭ್ಯ ಪಡೆಯದ ಅನುದಾನಿತ ಸಿಬ್ಬಂದಿ ವರ್ಗಕ್ಕೆ ಹಳೆಯ (ನಿಶ್ಚಿತ) ಪಿಂಚಣಿ ವ್ಯವಸ್ಥೆಯನ್ನು ಮುಂದುವರೆಸುವ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |
| ಈ) | ಈ ಅನುದಾನಿತ ಸಿಬ್ಬಂದಿ ವರ್ಗಗಳಿಗೆ ವೈದ್ಯಕೀಯ ವೆಚ್ಚ ಮರುಪಾವತಿ/ಆರೋಗ್ಯ ವಿಮಾ ಸೌಲಭ್ಯ/ಜ್ಯೋತಿ ಸಂಜೀವಿನಿ ಅಥವಾ ಈ ಮಾದರಿಯ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಏನು ಮತ್ತು ಯಾವಾಗ ಕ್ರಮ ಕೈಗೊಳ್ಳವುದು? | ಈ ಕುರಿತು ಸರ್ಕಾರದ ಮುಂದೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

(ಜಿ.ಟಿ ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 288 ಯುಪಿಸಿ 2018